ಆ) ರೂ. 7,500/– ಗಳಿಗೆ ಮೇಲ್ಪಟ್ಟ ಹಾಗೂ ರೂ. 35,000/– ಗಳವರೆಗಿನ ಮೊತ್ತದ ಬೆಳೆನಾಶಕ್ಕೆ ಶೇಕಡ 50 ರಷ್ಟು ಪರಿಹಾರ ಧನ ಕನಿಷ್ಠ ರೂ. 7,500/– ಮತ್ತು ಗರಿಷ್ಠ ರೂ. 21,250/–

ಇ) ರೂ. 35,000/–ಗಳಿಗೆ ಮೇಲ್ಪಟ್ಟ ಬೆಳೆನಾಶಕ್ಕೆ ಶೇಕಡ 30 ರಷ್ಟು ಪರಿಹಾರ ಧನ, ಕನಿಷ್ಠ ರೂ. 21,250/– ಮತ್ತು ಗರಿಷ್ಠ ರೂ. 50,000/–

ಜಮಖಂಡಿ ತಾಲ್ಲೂಕಿನ ಹಳ್ಳಿಗಳು

25 (259) ಶ್ರೀ ಶ್ರೀಕಾಂತ್ ಕುಲಕರ್ಣಿ ಸುಬ್ಬರಾವ್ (ಜಮಖಂಡಿ):– ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಜಮಖಂಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಯ ಹಿನ್ನೀರಿನಿಂದ (519.6 ಮೀ) ಮುಳುಗಡೆಯಾದ ಗ್ರಾಮಗಳು ಎಷ್ಟು;

ಆ) ಇವುಗಳಲ್ಲಿ ಪುನರ್ ವಸತಿಯಾಗದ ಹಳ್ಳಿಗಳು ಯಾವುವು;

ಇ) ಇವುಗಳ ಪುನರ್ ವಸತಿ ಹಾಗೂ ಮುಳುಗಡೆಯಾದ ಜಮೀನುಗಳಿಗೆ ಕೊಡಬೇಕಾದ ಪರಿಹಾರದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):–

ಅ) ಜಮಖಂಡಿ ತಾಲ್ಲೂಕಿನಲ್ಲಿ 18 ಗ್ರಾಮಗಳು ಮುಳುಗಡೆಯಾಗಿರುತ್ತದೆ.

ಆ) ಪುನರ್ವಸತಿಯಾಗದ ಹಳ್ಳಿಗಳು ಯಾವುದೂ ಇರುವುದಿಲ್ಲ

ಇ) ಇವುಗಳ ಪುನರ್ವತಿ ಹಾಗೂ ಮುಳುಗಡೆಯಾದ ಜಮೀನಿಗಳಿಗೆ ಪರಿಹಾರ ಧನ ನೀಡಲಾಗಿರುತ್ತದೆ.

ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಜಮೀನು ಹಸ್ತಾಂತರ

30 (68) ಶ್ರೀ ಕುಮಾರ ಸ್ವಾಮಿ ಕೆ.ಜಿ.(ಶಿವಮೊಗ್ಗ ಗ್ರಾಮಾಂತರ)):– ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸರ್ಕಾರದ ಆದೇಶ ಆರ್‌ಡಿ 32 ಎಲ್‌ಎಡಿ 62 ದಿನಾಂಕ 1–8–1963ರ ರೀತ್ಯಾ ಕಳೆದ ಮೂರು ವರ್ಷಗಳಿಂದ ನವೆಂಬರ್ 2011 ರವರೆಗೆ ಶಿವಮೊಗ್ಗ ಜಿಲ್ಲೆಯ